## ಗೌರವಾನ್ವಿತ 3 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಬೆಳಗಾವಿ.

**ಓ.ಎಸ್ ನಂಃ 398 ಃ 2010**

**ಡಿ. ಡಬ್ಲ್ಯೂ- 2**

ದಿ. **14-06-2018** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು .

ಮುಂದುವರೆದ ಪಾಟೀ ಸವಾಲು ಃ ಶ್ರೀ. ಎ.ಬಿ.ಎನ್. ವಕೀಲರಿಂದ ಃ-

(ಸಾಕ್ಷಿಗೆ ಕನ್ನಡ ಭಾಷೆ ಬಾರದ ಕಾರಣ ಮರಾಠಿ ಭಾಷೆ ಬರುತ್ತಿದ್ದು ಶ್ರೀ.ಎಸ್ ಎಸ್ ಕೆ ವಕೀಲರು ರೂ.100 ಗಳ ವೆಚ್ಚದೊಂದಿಗೆ ಕನ್ನಡ ಭಾಷ್ಷೆಗೆ ತರ್ಜುಮೆಯನ್ನು ಮಾಡಿರುತ್ತಾರೆ . )

ನಾನು ಕೇದನೂರು ಗ್ರಾಮದಲ್ಲಿ ಪಂಚರೆಂದು ಕೆಲಸ ಮಾಡುವುದಿಲ್ಲ. ಮನೆ ನಂ. 71 ರಿಂದ ಮನೆ 145 ವರೆಗೆ ಅಂದಾಜು 60 ರಿಂದ 70 ಮನೆಗಳು ಇರುತ್ತವೆ ಅಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು 20 ರಿಂದ 25 ಮನೆಗಳು ಇರಬಹುದು ಎಂದು ನುಡಿಯುತ್ತಾರೆ . ನಾನು ಹೇಳಿದಂತೆ 20 ರಿಂದ 25 ಮನೆಗಳ ಉದ್ದ ಮತ್ತು ಅಳತೆ ಹೇಳಲು ಬರುವುದಿಲ್ಲ. ಮನೆ ನಂ.125 ರ ಉದ್ದ ಮತ್ತು ಅಗಲ ನನಗೆ ಹೇಳಲು ಬರುವುದಿಲ್ಲ. ಸದರಿ ಮನೆ ನಂಬರನಲ್ಲಿ 10 ರಿಂದ 12 ಅಡಿ ಉದ್ದ ಖಾಲಿ ಜಾಗ ಇರಬಹುದು ಮತ್ತು 10 x 20 ಅಡಿ ಅಗಲ ಜಾಗ ಖಾಲಿ ಇರಬಹುದು . ನಾನು ಹೇಳುತ್ತಿರುವ ಅಳತೆ ಸುಳ್ಳು ಇದೆ ಅಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ತನ್ನ ಮನೆ 145 ಇರವುದರಿಂದ ತನಗೆ ಮಾಹಿತಿಯಿದೆ ಎಂದು ನುಡಿಯುತ್ತಾರೆ . ಮನೆ ನಂ.144 ನನ್ನದಲ್ಲ ಅದು ನನ್ನ ಅಣ್ಣನಿಗೆ ವಾಟ್ನಿಯಲ್ಲಿ ಸೇರಿರುತ್ತದೆ . ಮನೆ ನಂ.144 ನನ್ನ ಅಣ್ಣನಿಗೆ ಸೇರಿರುತ್ತದೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ವಾದಿಯು 2009 ರಲ್ಲಿ ತಾಲ್ಲೂಕು ಪಂಚಾಯತಿಯಲ್ಲಿ ಅಪೀಲು ಮಾಡಿದ್ದರು ಅದರ ನಂಬರ ನನಗೆ ಹೇಳಲು ಬರುವುದಿಲ್ಲ ಆದರೆ ಅದು ವಜಾ ಆಗಿರುತ್ತದೆ . ಸದರಿ ಅಪೀಲು ಏಕೆ ವಜಾ ಆಗಿರುತ್ತದೆ ಎಂದು ನನಗೆ ತಿಳಿದಿಲ್ಲ. ವಾದಿಯು ಜಿಲ್ಲಾ ಪಂಚಾಯತಿಯಲ್ಲಿ ಮತ್ತೆ ವಜಾಗೊಂಡ ಆದೇಶದ ವಿರುದ್ಧ ಅಪೀಲು ಮಾಡಿರುತ್ತಾರೆ ಅಂದರೆ ಸಾಕ್ಷಿಯು ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ .

ಈ ದಾವೆಯ ಬಗ್ಗೆ ನನಗೆ ಮಾಹಿಯಿಲ್ಲ ಅಂದರೆ ಸರಿಯಲ್ಲ. 2 ನೇ ಪ್ರತಿವಾದಿಯು ನನ್ನ ಸಂಬಂಧಿಯೆಂದು ಅವರ ಪರವಾಗಿ ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.ನಿಪಿ-35 ರ ಬಗ್ಗೆ ನನಗೆ ಮಾಹಿತಿಯಿಲ್ಲ. ವಾದಿಯ ಗೊಬ್ಬರ್ ಗ್ಯಾಸ್ , ಸೆಂಡಾಸ್ ನ್ನು ಪ್ರತಿವಾದಿಗಳು

ಹೊಡೆದು ಹಾಕಿ ಶೆಡ್ಡು ಕಟ್ಟಿರುತ್ತಾರೆ ಅಂದರೆ ಸರಿಯಲ್ಲ . ಪ್ರತಿವಾದಿಗಳು ಶೆಡ್ಡನ್ನು 2009 ರಲ್ಲಿ ಮನೆ ನಂ.145 ರ ಹಿಂದೆ ಕಟ್ಟಿರುತ್ತಾರೆ . ಪ್ರತಿವಾದಿಗಳು ವಾದಿಯ ಜಾಗದಲ್ಲಿ ಶೆಡ್ಡನ್ನು ಕಟ್ಟಿರುತ್ತಾರೆ ಅಂದರೆ ಸರಿಯಲ್ಲ. ಪ್ರತಿವಾದಿಗಳು ಬಾವಿ ಮುಚ್ಚಿ ಶೆಡ್ಡ ಕಟ್ಟಿರುತ್ತಾರೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ಮರು ವಿಚಾರಣೆ ಃ ಇರುವುದಿಲ್ಲ .

( ಸಾಕ್ಷಿಯ ಹೇಳಿಕೆಯನ್ನು ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿಯಿದೆ .

3 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು,
ಬೆಳಗಾವಿ.